OS No. 12/2017 PW-**1**

**<u>ದಿನಾಂಕ 25.07.2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಕೆ ಟಿ ಟಿ ವಕೀಲರಿಂದ ಃ</u>**

ನನ್ನ ಊರು ಎ. ವಿ ಹಳ್ಳಿ. ಸಿ ಎಲ್ ರಮೇಶ್ ರವರ ಊರು ಚಿಕ್ಕಮಳೂರು. ರಮೇಶ್ ರವರ ತಂದೆಯ ಹೆಸರು ಕೆ ಲಿಂಗಪ್ಪ. ರಮೇಶ್ ಮತ್ತು ಅವರ ತಂದೆ ಕೆ ಲಿಂಗಪ್ಪ ರವರು ನನಗೆ ಈ ದಾವಾ ನಡೆಯುವ ಮೊದಲು 8-10 ವರ್ಷಗಳಿಂದಲೂ ಪರಿಚಿತರು. ಅವರು ನನಗೆ ಸ್ನೇಹಿತರ ಮುಖಾಂತರ ಪರಿಚಿತರು. ಸಿ ಎಲ್ ರಮೇಶ್ ರವರಿಗೆ ಒಬ್ಬರು ತಂಗಿ ಇದ್ದರು. ರಮೇಶ್ ರವರ ತಂದೆ ಲಿಂಗಪ್ಪ ರವರು 2009 ರಲ್ಲಿ ತೀರಿಹೋಗಿರುತ್ತಾರೆ. ಸದರಿ ಲಿಂಗಪ್ಪನವರಿಗೆ 28 ಮುಕ್ಕಾಲು ಗುಂಟೆ ಆಸ್ತಿ ಮತ್ತೊಂದು ಮನೆ, ಖಾಲಿ ಸೈಟು ಇತ್ತು. ಲಿಂಗಪ್ಪನವರು ಬದುಕಿದ್ದಾಗ ನಾನು ಆಸ್ತಿಗಳನ್ನು ನೋಡಿರುತ್ತೇನೆ. ಲಿಂಗಪ್ಪನವರು ಬದುಕಿದ್ದಾಗ ಸದರಿ ಆಸ್ತಿಗಳ ದಾಖಲೆಗಳನ್ನು ನಾನು ನೋಡಿಲ್ಲ . ಸಿ ಎಲ್ ರಮೇಶ್ ರವರ ಹೆಸರಿಗೆ ಆಸ್ತಿಗಳು ವರ್ಗಾವಣೆಯಾಗುವ ಮೊದಲು ರಾಮಮ್ಮ ಕೋಂ ಕುಳ್ಳೇಗೌಡ ರವರ ಹೆಸರಿನಲ್ಲಿತ್ತು. ಸದರಿ ರಾಮಮ್ಮ ಕೋಂ ಕುಳ್ಳೇಗೌಡ ಅವರುಗಳು ಸಿ ಎಲ್ ರಮೇಶ್ ರವರ ಅಜ್ಜಿ ತಾತ. ಸಿ ಎಲ್ ರಮೇಶ್ ರವರ ಹೆಸರಿಗೆ ಅವರ ಅಜ್ಜಿಯಿಂದ ಎ ಸಿ ನ್ಯಾಯಾಲಯದ ಆದೇಶದ ಪ್ರಕಾರ ಆಗಿರುತ್ತದೆ. ಸದರಿ ಎ ಸಿ ನ್ಯಾಯಾಲಯದ ಆದೇಶದ ದೃಡೀಕೃತ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಎ ಸಿ ನ್ಯಾಯಾಲಯಕ್ಕೆ ಯಾರು ಕೇಸನ್ನು ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂಬರ್ ನ ಆಸ್ತಿ ಸಿ ಎಲ್ ರಮೇಶ್ ರವರಿಗೆ ಪಿತ್ರಾರ್ಜಿತ ಆಸ್ತಿ ಎಂದರೆ ಹೌದು. ಸದರಿ ಆಸ್ತಿಯನ್ನು ಖರೀದಿಸುವ ಮೊದಲು ನಾನು ಶೋಭಾರವರ ಒಪ್ಪಿಗೆಯನ್ನು ಪಡೆದುಕೊಂಡಿಲ್ಲ. ಪುಟ್ಟಸಾವಿತ್ರಮ್ಮ ರಮೇಶ್ ರವರಿಗೆ ಪರಿಚಿತರು. ಪುಟ್ಟ ಸಾವಿತ್ರಮ್ಮ ನನ್ನ ಹೆಂಡತಿ. ರಮೇಶ್ ರವರು ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ನನ್ನ ಬಳಿ ಹೇಳಿರುತ್ತಾರೆ. ನಾನು ಸದರಿ ಸ್ವತ್ತನ್ನು ಖರೀದಿ ಮಾಡುವ ಮೊದಲು ಪಬ್ಲಿಕ್ ನೋಟೀಸನ್ನು ಕೊಟ್ಟಿಲ್ಲ. ರಮೇಶ್ ರವರ ತಂಗಿ ರಮೇಶ್ ರವರ ವಿರುದ್ದ ವಿಭಾಗದ ಕೋರಿ ಸಿವಿಲ್ ನ್ಯಾಯಾಲಯದಲ್ಲಿ ಒ

ಎಸ್ ಸಂಖ್ಯೆ 34/13 ರಂತೆ ದಾವಾ ದಾಖಲಿಸಿರುತ್ತಾರೆಂದರೆ ಹೌದು. ಶೋಭಾರವರನ್ನು ನಾನು ನೋಡಿರಲಿಲ್ಲ. ಈ ದಾವಾದಲ್ಲಿ ಶೋಭಾರವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ. ಲಿಂಗಪ್ಪನವರು ಬದುಕಿದ್ದಾಗ ಲಿಂಗಪ್ಪ ಮತ್ತು ರಮೇಶ್ ರವರು ದಾವಾ ಸರ್ವೆ ನಂಬರ್ ನಲ್ಲಿ ಒಂದು ಶೆಡ್ಡನ್ನು ಕಟ್ಟಿ ಅಲ್ಲಿ ವಾಸ ಮಾಡಿಕೊಂಡಿದ್ದರು ಎಂದರೆ ಹೌದು. ಸದರಿ ಶೆಡ್ಡು ಈಗಲೂ ಇದೆ ಎಂದರೆ ಹೌದು. ಸದರಿ ಶೆಡ್ಡಿನಲ್ಲಿ ಪ್ರತಿವಾದಿ ಈಗ ವಾಸ ಮಾಡುತ್ತಿದ್ದಾರೆದರೆ ಸರಿಯಲ್ಲ ನಾನು ವಾಸ ಮಾಡುತ್ತಿದ್ದೇನೆ. ಲಿಂಗಪ್ಪ ರವರು ಬದುಕಿದ್ದಾಗ ಸದರಿ ಲಿಂಗಪ್ಪ ಮತ್ತು ರಮೇಶ್ ರವರು ಸೇರಿ ಸರ್ವೆ ನಂಬರ್ 17/1 ರಲ್ಲಿ 14 ಗುಂಟೆ ಜಮೀನನ್ನು ಪ್ರತಿವಾದಿ ಶಿವಲಿಂಗಯ್ಯನವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಸರ್ವೆ ನಂಬರ್ 17/1 ರ ಒಟ್ಟು ವಿಸ್ತೀರ್ಣ 28 ಮುಕ್ಕಾಲು ಇದೆ. ಸರ್ವೆ ನಂಬರ್ 17/1 ರಲ್ಲಿ ಒಟ್ಟು ವಿಸ್ತೀರ್ಣ 31 ಗುಂಟೆ ಜಮೀನು ಇದ್ದು ಅದರ ಪೈಕಿ 3 ವರೆ ಗುಂಟೆ ರಸ್ತೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿಯು ನನಗೆ ಗೊತ್ತಿರುವ ಪ್ರಕಾರ 2 ವರೆ ಗುಂಟೆ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರಂದು ನುಡಿಯುತ್ತಾರೆ. ಆ ಬಗ್ಗೆ ನ್ಯಾಯಾಲಯಕ್ಕೆ ನಾನು ದಾಖಲೆಯನ್ನು ಕೊಟ್ಟಿರುತ್ತೇನೆ. ಸದರಿ 31 ಗುಂಟೆ ಜಮೀನಿನಲ್ಲಿ 3 ವರೆ ಗುಂಟೆ ರಸ್ತೆಗೆ ಹೋಗಿರುವ ಆಸ್ತಿಯನ್ನು ಬಿಟ್ಟು ಲಿಂಗಪ್ಪನವರು ಮತ್ತು ರಮೇಶ್ ರವರು ತಲಾ 7 ಗುಂಟೆ ಜಮೀನನ್ನು ಭಾಗ ಮಾಡಿಕೊಂಡು ಇನ್ನು ಉಳಿದ ಆಸ್ತಿಯನ್ನು ಹೆಣ್ಣು ಮಕ್ಕಳಿಗೆ ಬಿಟ್ಟು ಕೊಟ್ಟು ತಮ್ಮ ಪಾಲಿಗೆ ಇಟ್ಟು ಕೊಂಡ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ಸುಳ್ಳು. ದಾವಾವನ್ನು ಸಲ್ಲಿಸುವ ಮೊದಲು ರಮೇಶ್ ರವರು ಮತ್ತು ಶೋಭಾರವರ ವಿರುದ್ಧ ಈ ಕೇಸಿನ ಪ್ರತಿವಾದಿ ಶಿವಲಿಂಗಯ್ಯ ರವರು ಒ ಎಸ್ ಸಂಖ್ಯೆ 82/2013 ರಂತೆ ದಾವಾ ಸಲ್ಲಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ . ಸದರಿ ದಾವಾದಲ್ಲಿ ನಾನು ಅರ್ಜಿ ಸಲ್ಲಿಸಿ ಪಕ್ಷಗಾರನಾಗಿ ಸೇರ್ಪಡೆ ಗೊಂಡಿರುತ್ತೇನೆ ಎಂದರೆ ಹೌದು. ನಾನು ಅರ್ಜಿಯನ್ನು ನಾನು ಸಲ್ಲಿಸುವ ಮೊದಲು ಶಿವಲಿಂಗಯ್ಯರವರು ಯಾವ ವಿಚಾರಕ್ಕೆ ದಾವಾ ಸಲ್ಲಿಸಿರುತ್ತಾರೆಂದು ತಿಳಿದುಕೊಂಡು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಹೌದು. ಸದರಿ ದಾವಾದಲ್ಲಿ ನಾನು ಪಕ್ಷಗಾರನಾಗಿ ಸೇರ್ಪಡೆಗೊಂಡ ನಂತರ ಶಿವಲಿಂಗಯ್ಯರವರು ಸಲ್ಲಿಸಿದ ದಾಖಲಾತಿಗಳನ್ನು ನೋಡಿರುತ್ತೇನೆ. ಒ ಎಸ್ ಸಂಖ್ಯೆ 82/2013 ದಲ್ಲಿ ರಮೇಶ್ ರವರು ನ್ಯಾಯಾಲಯಕ್ಕೆ ಹಾಜರಾಗುತ್ತಿಲ್ಲ ಎಂದು ಅರಿತು

ನಾನು ಸೇರ್ಪಡೆ ಗೊಂಡಿರುತ್ತೇನೆ ಎಂದರೆ ಹೌದು. ರಮೇಶ್ ರವರು ಅವರ ತಂಗಿ ಶೋಭರವರು ಸಲ್ಲಿಸಿದ ದಾವೆಯಲ್ಲಿ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಿರುತ್ತಾರೆಂದರೆ ಹೌದು. ಸದರಿ ದಾವಾದಲ್ಲಿ ಏನು ತಕರಾರನ್ನು ಸಲ್ಲಿಸಿರುತ್ತಾರೆಂದು ತಿಳಿದುಕೊಂಡಿರುತ್ತೇನೆ. ರಮೇಶ್ ರವರು ಶಿವಲಿಂಗಯ್ಯನವರು ಸಲ್ಲಿಸಿದ ಒ ಎಸ್ ಸಂಖ್ಯೆ 82/2013 ರಲ್ಲಿ ತಕರಾರನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಸಲ್ಲಿಸಿರುತ್ತಾರೆಂದು ನುಡಿಯುತ್ತಾರೆ. ನಾನು ಸದರಿ ದಾವೆಗೆ ಪಕ್ಷಗಾರನಾಗಿ ಸೇರ್ಪಡೆಗೊಂಡ ನಂತರ ರಮೇಶ್ ರವರು ತಕರಾರನ್ನು ಸಲ್ಲಿಸಿರುತ್ತಾರೆಂದರೆ ಹೌದು. ನಾನು ಮತ್ತು ರಮೇಶ್ ರವರು ತಕರಾರನ್ನು ಒಟ್ಟಿಗೆ ತಯಾರಿಸಿಲ್ಲ. 2009 ರಲ್ಲಿ ಲಿಂಗಪ್ಪ ಮತ್ತು ರಮೇಶ್ ರವರು ಬರೆದುಕೊಟ್ಟ ಕರಾರು ಪತ್ರದ ಪ್ರಕಾರ ಪ್ರತಿವಾದಿಗೆ 14 ಗುಂಟೆ ಸ್ವಾದೀನ ಕೊಟ್ಟಿರುತ್ತಾರೆಂದರೆ ಸಾಕ್ಷಿ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. 2011 ರಲ್ಲಿ ರಮೇಶ್ ರವರ ಹೆಸರಿಗೆ ಪ್ರತಿವಾದಿಯೇ ದಾವಾ ಆಸ್ತಿಯ ಖಾತಾ ವರ್ಗಾವಣೆ ಮಾಡಿಸಿರುತ್ತಾರೆಂದರೆ ಇಲ್ಲ. ನಾನು ಖಾತಾ ವರ್ಗಾವಣೆಯ ಸಮಯದಲ್ಲಿ ರೆವೆನ್ಯೂ ಕಛೇರಿಗೆ ಹಾಜರಾಗುತ್ತಿರಲಿಲ್ಲ. ಪ್ರತಿವಾದಿಗೆ ದಾವಾ ಆಸ್ತಿಯ ಖಾತೆಗಳು ಇನ್ನು ವರ್ಗಾವಣೆಯಾಗಿಲ್ಲ ಅದನ್ನು ವರ್ಗಾವಣೆ ಮಾಡಿಸಿಕೊಳ್ಳುತ್ತೇವೆಂದು ಮಾರಾಟ ಮಾಡಿದ್ದರು ಆದರೆ ರಮೇಶ್ ರವರು ದಾವಾ ಆಸ್ತಿಯ ಖಾತಾ ವರ್ಗಾವಣೆಯನ್ನು ಇನ್ನು ಮಾಡಿಸಿಕೊಳ್ಳದೇ ಇದ್ದುದ್ದರಿಂದ ಪ್ರತಿವಾದಿಯ ಮುತುವರ್ಜಿಯಿಂದ ರಮೇಶ್ ರವರ ಹೆಸರಿಗೆ ಖಾತೆಯನ್ನು ಮಾಡಿಸಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ಕೆ ಲಿಂಗಯ್ಯ ರವರು ಸಹಿ ಮತ್ತು ಹೆಬ್ಬಟ್ಟು ಎರಡನ್ನು ದಾಖಲಾತಿಗಳಿಗೆ ಹಾಕುತ್ತಿದ್ದರು.

ಕೆ ಲಿಂಗಯ್ಯರವರ ಸಹಿಯ ಪರಿಚಯವಿದೆ. ಪುಟ್ಟಸಾವಿತ್ರಮ್ಮ ರವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಮೊದಲು ಸಿ ವಿಶ್ವನಾಥ್ ರವರಿಗೆ ದಾವಾ ಆಸ್ತಿಯ ಬಗ್ಗೆ ಹಣ ಪಡೆದುಕೊಂಡು ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಸದರಿ ಕರಾರು ಪತ್ರವನ್ನು ಬರೆದುಕೊಡುವ ಸಮಯದಲ್ಲಿ ನಾನು ಹಾಜರಿರಲಿಲ್ಲ. ಸಿ ವಿಶ್ವನಾಥ್ ರವರಿಗೆ ಬರೆದುಕೊಟ್ಟ ಪತ್ರ ಅಂದರೆ ನಿಪಿ-20 ರ ದಾಖಲೆಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ದಾಖಲೆಯಲ್ಲಿ ಸಾಲ ತೆಗೆದುಕೊಂಡಿದ್ದರಿಂದ ಭದ್ರತೆಗಾಗಿ ದಾಖಲೆಯನ್ನು ಬರೆಸಿಕೊಳ್ಳಲಾಗಿದೆ ಎನ್ನುವ ಒಕ್ಕಣೆ ಇದೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸಿ ಎಲ್ ರಮೇಶ್ ರವರು ಸಿ ವಿಶ್ವನಾಥ್ ರವರ ಬಳಿ

ಸಾಲ ಮಾಡಿದ್ದರು ಎಂದು ಬರೆಸಿಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪ್ಯಾರ ಸಂಖ್ಯೆ 3 ರ 6 ನೇ ಸಾಲಿನಲ್ಲಿ ಸದರಿ ಸಿ ವಿಶ್ವನಾಥ್ ರವರು ಹಣದ ತೊಂದರೆಯಿಂದಾಗಿ ದಾವಾ ಸ್ವತ್ತಿನ ಕರಾರಿನಂತೆ ಕೊಂಡುಕೊಳ್ಳಲು ಆಗಿಲ್ಲ ಎಂದು ಬರೆಸಿರುತ್ತೇನೆ. ನನಗೆ ಸದರಿ ಸಿ ವಿಶ್ವನಾಥ್ ರವರು ದಾವಾ ಸ್ವತ್ತನ್ನು ಖರೀದಿಸುವ ಮೊದನಿಂದಲೂ ಗೊತ್ತು. ಸದರಿ ಸಿ ವಿಶ್ವನಾಥ್ ರವರು ಜಮೀನುದಾರರು ಎಂದರೆ ಹೌದು ಅವರಿಗೆ ಸುಮಾರು 50-60 ಎಕರೆ ಜಮೀನು ಇದೆ ಎಂದರೆ ಹೌದು. ದಾವಾ ಸ್ವತ್ತಿನ ಖಾತಾ ವರ್ಗಾವಣೆ ಆದ ನಂತರ  ನಾನು ಮತ್ತು ರಮೇಶ್ ರವರು ಪಿತೂರಿ ನಡೆಸಿ ಸೇರಿಕೊಂಡು ವಿಶ್ವನಾಥ್ ರವರ ಹೆಸರಿಗೆ ಸುಳ್ಳು ಕರಾರು ಪತ್ರವನ್ನು ಮಾಡಿರುತ್ತೇವೆ ಎಂದರೆ ಸುಳ್ಳು. ಸದರಿ ವಿಶ್ವನಾಥ್ ರವರ ಹೆಸರಿಗೆ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದಾದರೆ ಪ್ರತಿವಾದಿ ದಾವಾ ಆಸ್ತಿಯನ್ನು ಬಿಟ್ಟು ಬಿಡುತ್ತಾರೆನ್ನುವ ಉದ್ದೇಶದಿಂದ ಸದರಿ ಕರಾರು ಪತ್ರವನ್ನು ಬರೆಸಿರುತ್ತೇವೆ ಎಂದರೆ ಸುಳ್ಳು. ಸಿ. ವಿಶ್ವನಾಥ್ ರವರ ತಂದೆಯ ಅಣ್ಣ ತಮ್ಮಂದಿರ ಮಕ್ಕಳು ಪ್ರಭಾವಿಯಾಗಿರುವುರಿಂದ ಚಿಕ್ಕಮಳೂರು ಗ್ರಾಮದ ಎಲ್ಲಾ ವ್ಯವಹಾರಗಳಲ್ಲಿ ಭಾಗಿಯಾಗುತ್ತಾರೆಂದರೆ ಇಲ್ಲ. ದಾವಾ ಸ್ವತ್ತಿನ ವ್ಯವಹಾರವಾದ ನಂತರ ನನ್ನ ಹೆಸರಿಗೆ 2 ವರ್ಷದ ನಂತರ ದಾನ ಪತ್ರವಾಗಿರುತ್ತದೆ ಎಂದರೆ ಸರಿ. ವ್ಯಾಪಾರ ಆದಾಗಲೇ ನಿಮ್ಮ ಹೆಸರಿಗೆ ಕ್ರಯ ಪತ್ರವನ್ನು ಬರೆಸಿಕೊಳ್ಳಲು ತೊಂದರೆ ಇತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿ ನನ್ನ ಬಳಿ ಹಣ ಇರಲಿಲ್ಲ ಎಂದು ನುಡಿಯುತ್ತಾರೆ.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.